# ಮಾಸ ಭವಿಷ್ಯ

**ಅರುಣ ಪಿ. ಭಟ್**



**ಮೇಷ:** ಉದ್ಯೋಗದಲ್ಲಿ ಬಡ್ತಿ. ಆದಾಯದ ಮೂಲಗಳು ಹೆಚ್ಚಲಿವೆ. ಪಾಲುದಾರಿಕೆಯ ವ್ಯಾಪಾರದಲ್ಲಿ ಅನಗತ್ಯ ಚರ್ಚೆ ಉಂಟಾಗಬಹುದು. ಸಹೋದರ ಸಹೋದರಿಯರಿಂದ ವ್ಯಾಪಾರದಲ್ಲಿ ಲಾಭ. ಸಂಗಾತಿಯಿಂದ ಕಹಿ ಮಾತುಗಳನ್ನು ಕೇಳುವಿರಿ, ಪರಸ್ಪರ ತಾಳ್ಮೆಯಿಂದ ಇರುವುದು ಅಗತ್ಯ. ಶುಭ: 12,16,24 ಅಶುಭ: 11,15,25.



**ವೃಷಭ:** ಸರ್ಕಾರಿ ನೌಕರರಿಗೆ ಉತ್ತಮ ಸಮಯ. ಹಳೆಯ ವ್ಯಾಧಿಗಳಿಂದ ಸ್ವಲ್ಪ ತೊಂದರೆ. ಮನೆಯಲ್ಲಿ ಸಂತಸದ ವಾತಾವರಣ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಯಶಸ್ಸು. ಕೋರ್ಟು ವ್ಯಾಜ್ಯಗಳಲ್ಲಿ ಯಶಸ್ಸು. ಹಣಕಾಸಿನ ವಿಷಯದಲ್ಲಿ ಉತ್ತಮ ಬೆಳವಣಿಗೆ. ಶುಭ: 10,18,21 ಅಶುಭ: 12,16,27.



**ಮಿಥುನ:** ರಾಜಕೀಯ, ಸಮಾಜ ಸೇವಾ ಕ್ಷೇತ್ರದಲ್ಲಿರುವವರಿಗೆ ಉತ್ತಮ ಸಮಯ. ಅಲಂಕಾರಿಕ ಸಾಮಗ್ರಿಗಳ ಖರೀದಿ. ಐಹಿಕ ಸುಖದ ಜೊತೆಗೆ ಪಾರಮಾರ್ಥಿಕ ಜ್ಞಾನ ಪಡೆಯಲು ಮನಸ್ಸು ಮಾಡುವಿರಿ. ಸತ್ಪುರುಷರ ಭೇಟಿ. ಮೇಲಧಿಕಾರಿಗಳ ಕಿರಿಕಿರಿ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ. ಶುಭ: 12,16,23 ಅಶುಭ: 10,14,25.



**ಕರ್ಕ:** ವ್ಯಾಪಾರ–ಉದ್ಯೋಗದಲ್ಲಿ ಆರ್ಥಿಕ ಲಾಭ. ಕುಟುಂಬ ಸದಸ್ಯರ ಸಹಾಯ ಲಭಿಸುವುದು. ಹೊರಗಿನವರ ಸಲಹೆಗಳಿಗೆ ಕಿವಿಗೊಡಬೇಡಿ. ಅನಾರೋಗ್ಯದಿಂದ ತೊಂದರೆಯಾದಾಗ ತಜ್ಞ ವೈದ್ಯರ ಸಲಹೆ ಪಡೆಯಿರಿ. ಹೊಸ ಮೂಲಗಳಿಂದ ಆದಾಯ, ಇದರಿಂದ ಸಂತೋಷ. ಶುಭ: 13,22,29 ಅಶುಭ: 12,18,26.



**ಸಿಂಹ:** ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವವು. ಕೆಲವು ವಿಷಯಗಳಲ್ಲಿ ಮಿತ್ರರಿಂದ ವಿರೋಧ ಎದುರಾಗುವುದು. ಕೃಷಿ ಉತ್ಪನ್ನ ವಿಕ್ರಯದಾರರಿಗೆ ಲಾಭ. ಮಹತ್ವದ ಮಾತುಕತೆ. ಮನೆಯಲ್ಲಿ ಧಾರ್ಮಿಕ ಕಾರ್ಯ. ಶುಭ: 06,14,23 ಅಶುಭ: 16.20.25.



**ಕನ್ಯಾ:** ಅನಿರೀಕ್ಷಿತ ಖರ್ಚು. ಸರಕಾರಿ ಕೆಲಸದಲ್ಲಿ ವ್ಯತ್ಯಯ. ಸೇವಕರಿಂದ ಹಾನಿ, ತೊಂದರೆ. ಬಂಧುಗಳಿಗೆ ಆಪತ್ತು. ಅಧಿಕಾರಿಗಳಿಗೆ ಹಿನ್ನಡೆ. ಅವಿವಾಹಿತರಿಗೆ ವಿವಾಹ ಭಾಗ್ಯದ ಸೂಚನೆ. ತಿಂಗಳ ಕೊನೆಗೆ ಮನೆಯ ಆರ್ಥಿಕ ವ್ಯವಸ್ಥೆ ಉತ್ತಮಗೊಳ್ಳುವುದು. ಹಣದ ಒಳಹರಿವು ಹೆಚ್ಚಾಗುವುದು. ಶುಭ: 09,16,23 ಅಶುಭ: 12,20,26.



**ತುಲಾ:** ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶಗಳು, ವಾಪಾರಸ್ಥರಿಗೆ ಅನುಕೂಲ, ಆಕಸ್ಮಿಕ ಧನಲಾಭ. ವಿವಾಹಾಪೇಕ್ಷಿಗಳಿಗೆ ಶುಭ ಸುದ್ದಿ. ಮಕ್ಕಳ ನಿರೀಕ್ಷೆಯಲ್ಲಿರುವವರಿಗೆ ಸಂತಾನ ಭಾಗ್ಯ. ಹಣಕಾಸಿನ ಸ್ಥಿತಿ ಸುಧಾರಿಸುವುದು. ದುಬಾರಿ ವಸ್ತುಗಳ ಖರೀದಿ. ಕುಟುಂಬ ಸೌಖ್ಯ. ಶುಭ: 07,14,21. ಅಶುಭ: 11,16,26.



**ವೃಶ್ಚಿಕ:** ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ವಿದೇಶಿ ಪ್ರವಾಸಕ್ಕೆ ಸಿದ್ಧತೆ. ಸರ್ಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ. ಪ್ರಾಣಾಪಾಯ ಭೀತಿ. ಮನೆಗೆ ಬಂದುಮಿತ್ರರ ಆಗಮನ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು. ಶುಭ 10,12,21 ಅಶುಭ: 14,16,22.




**ಧನು:** ಬಹಳ ಕಾಲದ ನಂತರ ಸೋದರ ಸಂಬಂಧಿಗಳನ್ನು ಭೇಟಿ ಆಗಲಿದ್ದೀರಿ. ಉದ್ಯೋಗಸ್ಥರಿಗೆ ತಾತ್ಕಾಲಿಕ ವರ್ಗಾವಣೆ ಸಾಧ್ಯತೆ. ಕೌಟುಂಬಿಕ ಜೀವನದಲ್ಲಿ ಸಂತೋಷ. ವ್ಯಾಪಾರ ವ್ಯವಹಾರ ಮಾಡುತ್ತಿರುವವರಿಗೆ ಉತ್ತಮ ಪ್ರಗತಿ. ದಾಖಲೆ ಪತ್ರಗಳ ಬಗ್ಗೆ ಹೆಚ್ಚು ಎಚ್ಚರಿಕೆಯಿಂದಿರಿ. ಶುಭ: 14,26,30 ಅಶುಭ: 12,18,22.



**ಮಕರ:** ತಿಂಗಳ ಶುರುವಿನಲ್ಲೇ ಆದಾಯ ಹೆಚ್ಚುವುದು, ಖರ್ಚನ್ನು ಕಡಿಮೆ ಮಾಡಿಕೊಳ್ಳುವಿರಿ. ಉದ್ಯಮಿಗಳು, ಉದ್ಯೋಗಸ್ಥರು ಹಿಂದೆಂದಿಗಿಂತ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುವಿರಿ. ವರ್ಚಸ್ಸು, ಸ್ಥಾನಮಾನ ಹೆಚ್ಚಾಗಲಿದೆ. ವೈಯಕ್ತಿಕ ಜೀವನದಲ್ಲಿ ಭಿನ್ನಾಭಿಪ್ರಾಯ ತಲೆದೋರಲಿದೆ. ಶುಭ: 14,16,29 ಅಶುಭ: 18,20,22.



**ಕುಂಭ:** ವ್ಯಾಪಾರ, ವ್ಯವಹಾರ, ಉದ್ಯಮ ಮಾಡುತ್ತಿರುವವರಿಗೆ ಅತ್ಯುತ್ತಮವಾದ ಸಮಯ. ಆರೋಗ್ಯ ಉತ್ತಮವಾಗಿರುತ್ತದೆ. ಅಂದುಕೊಂಡ ಕೆಲಸಗಳು ಪೂರ್ಣಗೊಳ್ಳುತ್ತವೆ. ಉದ್ಯೋಗಸ್ಥರು ಕೆಲಸದಲ್ಲಿ ಗುಣಮಟ್ಟದ ವೇಗ ಕಂಡುಕೊಳ್ಳುವರು. ಸಾಮಾಜಿಕ ಸ್ಥಾನಮಾನ ದೊರೆಯಲಿದೆ. ಶುಭ: 11,16,24 ಅಶುಭ: 15,18,24.



**ಮೀನ:** ಶೈಕ್ಷಣಿಕ ವಲಯದಲ್ಲಿರುವವರು, ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಅವಧಿ. ತಂತ್ರಜ್ಞಾನ, ಸಾಹಿತ್ಯ ಹಾಗೂ ಸಿನಿಮಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಹೊಸ ಅವಕಾಶಗಳು, ಬಡ್ತಿ ಸಿಗುವ ಸಾಧ್ಯತೆ. ಆರೋಗ್ಯದ ನಿರ್ಲಕ್ಷ್ಯ ಬೇಡ. ಸಕಾರಾತ್ಮಕ ಅವಕಾಶಗಳು ಬರಲಿವೆ. ಶುಭ:12,16,22 ಅಶುಭ: 14,16,23.